**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ. ಚನ್ನಪಟ್ಟಣ.</u>**

**ಉಪಸ್ಥಿತರು: ಶ್ರೀ ಮಹೇಂದ್ರ ಎಂ.,** ಬಿ.ಎ ಎಲ್ಎಲ್.ಬಿ.,
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**<u>ದಿನಾಂಕ: 1 ನೇ ಜುಲೈ -2022</u>**

**<u>ಓ.ಎಸ್.ನಂ.103/2022</u>**

**<u>ವಾದಿಗಳು</u>** : ಶ್ರೀ.ವೈ ಎಂ.ಬಸವರಾಜು ಮತ್ತು ಇನ್ನೊಬ್ಬರು

-ವಿರುದ್ಧ-

**<u>ಪ್ರತಿವಾದಿಗಳು</u>** : ಶ್ರೀ.ನಂಜುಂಡಸ್ವಾಮಿ ಮತ್ತು ಇನ್ನೊಬ್ಬರು

**<u>ಮಧ್ಯಂತರ ಅರ್ಜಿ ಸಂಖ್ಯೆ:2</u>**

**<u>ವಾದಿಗಳು/ಅರ್ಜಿದಾರರು</u>**: 1. ಶ್ರೀ ವೈ ಎಂ ಬಸವರಾಜು
ಬಿನ್ ಲೇಟ್ ಶಿವನಂಜಪ್ಪ
ವಯಸ್ಸು: 69 ವರ್ಷ,

2. ಕುಮಾರಿ ಭಾಗ್ಯಮ್ಮ
ಬಿನ್ ಲೇಟ್ ಶಿವನಂಜಪ್ಪ
ವಯಸ್ಸು: 55 ವರ್ಷ,

ಇಬ್ಬರ ವಾಸ ವಾಸ:
ಎಲೆತೋಟದ ಹಳ್ಳಿ ಗ್ರಾಮ,
ವಿರುಪಾಕ್ಷಿಪುರ ಹೋಬಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

ಹಾಲಿ ವಾಸ:
ನಂ. 119, 4 ನೇ ಮುಖ್ಯ ರಸ್ತೆ,
2 ನೇ ಅಡ್ಡ ರಸ್ತೆ,
ಅದಿತ್ಯ ನಗರ,
ಕೊತ್ತನೂರು ರಸ್ತೆ
ಬೆಂಗಳೂರು - 62.

**(ಪ್ರತಿನಿಧಿಸುವವರು ಶ್ರೀ.ಆರ್.ಜಿ.ಪಿ., ವಕೀಲರು)**

-ವಿರುದ್ಧ-

**ಪ್ರತಿವಾದಿಗಳು/ಎದುರುದಾರರು** :1. ಶ್ರೀ. ನಂಜುಂಡಸ್ವಾಮಿ
ಬಿನ್ ಲೇಟ್ ಸುಂದರದೇವರು,
ವಯಸ್ಸುಃ 40 ವರ್ಷ,

2. ಶ್ರೀ. ಮಹದೇವ ಸ್ವಾಮಿ
ಬಿನ್ ಲೇಟ್ ಸುಂದರದೇವರು
ವಯಸ್ಸುಃ 38 ವರ್ಷ,

ಇಬ್ಬರ ವಾಸಃ
ಎಲೆತೋಟದ ಹಳ್ಳಿ ಗ್ರಾಮ,
ವಿರುಪಾಕ್ಷಿಪುರ ಹೋಬಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

**(ಪ್ರತಿನಿಧಿಸುವವರು ಪ್ರತಿವಾದಿ 1 ಮತ್ತು 2 ರ ಪರವಾಗಿ ಶ್ರೀ.ಹೆಚ್ ಆರ್ ಎಸ್., ವಕೀಲರು)**

## ಮಧ್ಯಂತರ ಅರ್ಜಿ ಸಂಖ್ಯೆ:II ರ ಮೇಲಿನ ಆದೇಶಃ

ಮಾನ್ಯ ವಾದಿಯರ ಪರ ವಕೀಲರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ.151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ:II ನ್ನು ಸಲ್ಲಿಸಿ, ಪ್ರತಿವಾದಿಗಳಾಗಲೀ ಅಥವಾ ಅವರ ಸಂಬಂಧಿಕರಾಗಲೀ, ಅವರ ವಾರಸುದಾರರಾಗಲೀ ಅಥವಾ ಯಾರೇ ಆಗಲೀ ಈ ದಾವೆ ಇತ್ಯರ್ಥವಾಗುವವರಗೆ ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡದಂತೆ ಹಾಗೂ ದಾವಾ ಸ್ವತ್ತಿಗೆ ಪ್ರತಿವಾದಿಗಳು ತೊಂದರೆ ಮಾಡದಂತೆ ನಿರ್ಭಂಧಿಸುವ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾರೆ.

2. 1 ನೇ ವಾದಿಯು ಈ ಮಧ್ಯಂತರ ಅರ್ಜಿ ಜೊತೆಗೆ ಪ್ರಮಾಣ ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. ದಾವಾ ಸ್ವತ್ತು ವಾದಿಗಳಿಗೆ ಪಿತ್ರಾರ್ಜಿತವಾಗಿ ಬಂದು ಅವರೇ ಸ್ವಾಧೀನಾನುಭವವನ್ನು ಹೊಂದಿದ್ದು, ಅವರ ತಾತನಾದ ಮರಿಶೆಟ್ಟಿ ರವರ ಹೆಸರನಲ್ಲಿ ಖಾತೆ ಇರುತ್ತದೆ. ಅವರ ಮರಣಾನಂತರ ದಾವಾ ಸ್ವತ್ತು ವಾದಿಗಳ ತಂದೆಯಾದ ಮತ್ತು ಮರಿಶೆಟ್ಟಿಯವರ 1 ನೇ ಮಗನಾದ ವೈ.ಎಂ ಶಿವನಂಜಪ್ಪ ರವರ ಭಾಗಕ್ಕೆ ಬಂದಿರುತ್ತದೆ. ಶಿವನಂಜಪ್ಪ ರವರು ವಾದಿಗಳು ಮತ್ತು ಇತರರ ಪರವಾಗಿ ದಿಃ25.05.1983 ರಂದು ಮರಣಶಾಸನ ಬರೆದಿರುತ್ತಾರೆ. ಆ ಪ್ರಕಾರವಾಗಿ ವಾದಿಗಳು ಮತ್ತು ಅವರ ಸಹೋದರಿಯರು ಸ್ವಾಧೀನಾನುಭವದಲ್ಲಿ ಇರುತ್ತಾರೆ. ವಾದಿಗಳು

ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವುದರಿಂದ ದಾವಾ ಸ್ವತ್ತು ಮತ್ತು ಇನ್ನಿತರ ಸ್ವತ್ತುಗಳನ್ನು ವ್ಯವಸಾಯ ಮಾಡಲು ತಮ್ಮ ಸಂಬಂಧಿಕರಿಗೆ ಬೆಳೆದ ಫಸಲಿನಲ್ಲಿ ಅರ್ಧ ಭಾಗವನ್ನು ಪ್ರತಿವರ್ಷ ನೀಡುವಂತೆ ತಿಳಿಸಿ ಬಾಯಿ ಮಾತಿನ ಮೂಲಕ ಬಿಟ್ಟುಕೊಟ್ಟಿರುತ್ತಾರೆ. ಅ ಪ್ರಕಾರವಾಗಿ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು ಫಸಲಿನ ಅರ್ಧ ಪಾಲನ್ನು ವಾದಿಗಳಿಗೆ 2019-20 ನೇ ಸಾಲಿನವರೆಗೆ ನೀಡುತ್ತಾ ಬಂದಿರುತ್ತಾರೆ. ಆನಂತರ ಪ್ರತಿವಾದಿಗಳು ದುರುದ್ದೇಷದಿಂದ ಸದರಿ ಅರ್ಧ ಪಾಲನ್ನು ವಾದಿಗಳಿಗೆ ನೀಡದೆ ದಾವಾ ಸ್ವತ್ತನ್ನು ಬಿಟ್ಟುಕೊಡದೇ ತೊಂದರೆ ನೀಡುತ್ತಿರುತ್ತಾರೆ. ಈ ಬಗ್ಗೆ ಹಿರಿಯರ ಸಮಕ್ಷಮ ಪಂಚಾಯಿತಿ ನಡೆಸಿದರೂ ಸಹ ಪ್ರತಿವಾದಿಗಳು ಅವರ ಮಾತಿಗೆ ಬೆಲೆ ಕೊಟ್ಟಿರುವುದಿಲ್ಲ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸದಿದ್ದರೆ ವಾದಿಗಳಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. **ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.**

3. ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, ಮಧ್ಯಂತರ ಅರ್ಜಿ ಸಂ.2 ಕ್ಕೆ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ವಾದಿಗಳ ಪ್ರಮಾಣ ಪತ್ರದ ಸಂಗತಿಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಪ್ರತಿವಾದಿಗಳು ಮುಂದುವರೆದು ದಾವಾ ಸ್ವತ್ತು ವಾದಿಗಳು ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ದಾವಾ ಸ್ವತ್ತಿನ ಖಾತೆಯು ಪ್ರತಿವಾದಿಗಳ ತಾತ ಮರಿಶೆಟ್ಟಿ ಉಃ ಚಿಕ್ಕಮರಿಶೆಟ್ಟಿ ರವರ ಹೆಸರಿನಲ್ಲಿ ಈಗಲೂ ಚಾಲ್ತಿಯಲ್ಲಿರುತ್ತದೆ. ಪ್ರತಿವಾದಿಗಳ ಮುತ್ತಾತ ಶೆಟ್ಟರ ಬಸಪ್ಪರವರಿಗೆ ಇಬ್ಬರು ಮಕ್ಕಳಿದ್ದು, ಅವರು ತಮ್ಮ ಜೀವಿತ ಕಾಲದಲ್ಲಿ ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ಈಗಲೂ ದಾವಾ ಸ್ವತ್ತು ಜಂಟಿ ಸ್ವಾಧೀನದಲ್ಲಿರುತ್ತದೆ. ಪ್ರತಿವಾದಿಗಳ ಜೀವನೋಪಯಕ್ಕಾಗಿ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸೀಮೆಹುಲ್ಲು, ತರಕಾರಿಗಳು ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿರುತ್ತಾರೆ. ವಾದಿಗಳು ತಮಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತನ್ನು ಮಾರಾಟ ಮಾಡಿ ಬಂದ ಹಣದಿಂದ 30 ವರ್ಷಗಳ ಹಿಂದೆಯೇ ಬೆಂಗಳೂರಿಗೆ ಹೋಗಿ ಜೀವನ ಮಾಡುತ್ತಿರುತ್ತಾರೆ. ವಾದಿಗಳು ದಾವಾ ಸ್ವತ್ತನ್ನು ಪ್ರತಿವಾದಿಗಳಿಗೆ ಯಾವತ್ತು ಬಿಟ್ಟು ಕೊಟ್ಟಿರುವುದಿಲ್ಲ. ವಾದಿಗಳು ದಾವಾ ಸ್ವತ್ತಿನಲ್ಲಿ ಯಾವತ್ತು ಸ್ವಾಧೀನಾನುಭವದಲ್ಲಿ ಇರುವುದಿಲ್ಲ. ವಾದಿಗಳು ಈವರೆವಿಗೂ ಸ್ವತ್ತುಗಳನ್ನು ವಿಭಾಗಮಾಡಿಕೊಟ್ಟಿರುವುದಿಲ್ಲ. ಆದ್ದರಿಂದ ಪ್ರತಿವಾದಿಗಳು ವಾದಿಗಳ ಚಿಕ್ಕಪ್ಪಂದಿರುಗಳಾದ ಶಿವಬಸಪ್ಪ ಮತ್ತು ಮರಿದೇವರ ವಿರುದ್ಧ ಭಾಗಾಂಶಕ್ಕಾಗಿ ಅಸಲು ದಾವಾ ಸಂ.82/2022 ರಂತೆ ದಾವೆ ಸಲ್ಲಿಸಿರುತ್ತಾರೆ. ಸದರಿ ದುರುದ್ದೇಷದಿಂದ ವಾದಿಗಳು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಗಳು ಸುಮಾರು 20 ವರ್ಷಗಳಿಂದ ದಾವಾ ಸ್ವತ್ತಿನಲ್ಲಿ

ಸ್ವಾಧೀನಾನುಭವದಲ್ಲಿರುತ್ತಾರೆ. **ಆದ್ದರಿಂದ ವಾದಿಗಳು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯನ್ನು ವಜಾಗೋಳಿಸಬೇಕೆಂದು ಕೋರಿರುತ್ತಾರೆ.**

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**ಃಅಂಶಗಳುಃ**

1. **ವಾದಿಗಳು ಮೇಲ್ನೋಟಕ್ಕೆ ದಾವೆಯನ್ನು ತಮ್ಮ ಪರವಾಗಿ ಹೊಂದಿರುತ್ತಾರೆಯೇ?**
2. **ಅನುಕೂಲತೆಯ ಒಲವು ವಾದಿಗಳ ಪರವಾಗಿ ಇದೆಯೇ?**
3. **ಮಧ್ಯಂತರ ಅರ್ಜಿ ಸಂಖ್ಯೆಃII ನ್ನು ವಜಾ ಮಾಡಿದರೆ ವಾದಿಗಳಿಗೆ ತುಂಬಲಾರದ ನಷ್ಟವುಂಟಾಗುತ್ತದೆಯೇ?**
4. **ಮಾಡುವ ಆದೇಶ ಏನು?**

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಕಡತಗಳಲ್ಲಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

**ಅಂಶ ಸಂಖ್ಯೆ1 ಃ ನಕಾರಾತ್ಮಕವಾಗಿ**
**ಅಂಶ ಸಂಖ್ಯೆ2 ಃ ನಕಾರಾತ್ಮಕವಾಗಿ**
**ಅಂಶ ಸಂಖ್ಯೆ3 ಃ ನಕಾರಾತ್ಮಕವಾಗಿ**
**ಅಂಶ ಸಂಖ್ಯೆ4 ಃ ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,**

**ಕಾರಣಗಳು**

7. **ಅಂಶ ಸಂಖ್ಯೆಃ1 ರಿಂದ 3ಃ** ಈ ಮೂರು ಅಂಶಗಳಿಗೆ ಸಂಬಂಧಿಸಿದಂತೆ ಚರ್ಚಿಸುವ ವಿಷಯಗಳು ಒಂದೇ ಆಗಿರುವುದರಿಂದ ಈ ಮೂರು ಅಂಶಗಳನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿರುತ್ತದೆ.

8. ವಾದಿಯರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ದಾವಾ ಸ್ವತ್ತು ವಾದಿಗಳಿಗೆ ಸೇರಿದ್ದಾಗಿದ್ದು ಮರಣ ಶಾಸನದ ಪ್ರಕಾರ ಹಕ್ಕನ್ನು ಹೊಂದಿರುತ್ತಾರೆ. ಆನಂತರ ವಾದಿಗಳು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದು, ದಾವಾ ಸ್ವತ್ತನ್ನು ವ್ಯವಸಾಯ ಮಾಡಲು ಮೌಖಿಕವಾಗಿ ಪ್ರತಿವಾದಿಗಳಿಗೆ ಬಿಟ್ಟುಕೊಟ್ಟಿರುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ

ಬೆಳೆದ ಫಸಲಿನ ಅರ್ಧಭಾಗವನ್ನು ವಾದಿಗಳಿಗೆ 2019-20 ನೇ ಸಾಲಿನವರೆಗೆ ನೀಡುತ್ತಿದ್ದು ಆ ನಂತರ ಅರ್ಧ ಭಾಗದ ಫಸಲಿನ ಹಣವನ್ನು ವಾದಿಗಳಿಗೆ ನೀಡದೆ ಮತ್ತು ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಗಳಿಗೆ ಬಿಟ್ಟು ಕೊಡದೆ ತೊಂದರೆ ನೀಡುತ್ತಿರುತ್ತಾರೆ. ಇದರಿಂದ ವಾದಿಗಳ ಶಾಂತಿಯುತ ಸ್ವಾಧೀನಾನುಭವಕ್ಕೆ ದಕ್ಕೆ ಉಂಟಾಗಿರುತ್ತದೆ. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

9. ಪ್ರತಿವಾದಿಗಳ ಪರ ವಕೀಲರು ತಮ್ಮ ವಾದ ವನ್ನು ಮಂಡಿಸುತ್ತಾ, ದಾವಾ ಸ್ವತ್ತು ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಸ್ವತ್ತಾಗಿರುತ್ತದೆ. ಪ್ರತಿವಾದಿಗಳು ಈ ಸಂಬಂಧವಾಗಿ ಅಸಲು ದಾವಾ ಸಂ.82/2022 ರಂತೆ ಭಾಗಾಂಶ ಕೋರಿ ದಾವೆ ಸಲ್ಲಿಸಿರುತ್ತಾರೆ. ಒಟ್ಟು ಕುಟುಂಬದ ಸ್ವತ್ತುಗಳು ಇನ್ನು ವಿಭಾಗವಾಗುವುದಿಲ್ಲ. ವಾದಿಗಳು ತಮ್ಮ ದಾವೆಯಲ್ಲಿ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸಾಧೀನದಲ್ಲಿ ಇರುವ ಬಗ್ಗೆ ಒಪ್ಪಿಕೊಂಡಿದ್ದು ಇದರಿಂದ ಪ್ರಸ್ತುತ ದಾವೆಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಮಧ್ಯಂತರ ಅರ್ಜಿ ಸಂಖ್ಯೆಃ2 ನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

10. ವಾದಿಯರು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲೀಸಿದಾಗ, ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಗಣಕೀಕೃತ ಪಹಣಿ, ಋಣಭಾರ ರಾಹಿತ್ಯ ಪ್ರಮಾಣ ಪತ್ರಗಳು, ಕಂದಾಯ ಪಾವತಿ ರಶೀದಿ, ಮರಣ ಶಾಸನ, ಭೋಗ್ಯ ಪತ್ರ, ದಿಃ30.12.2021 ರ ತಿಳುವಳಿಕೆ ನೋಟೀಸಿನ ಪ್ರತಿ, ಅಂಚೆ ರಶೀದಿಗಳು, ಅಂಚೆ ಸ್ವೀಕೃತಿಗಳು ಮತ್ತು ದಿಃ28.01.2022 ರ ಜವಾಬು ನೋಟಿಸನ್ನು ಹಾಜರುಪಡಿಸಿರುತ್ತಾರೆ.

11. ಪ್ರತಿವಾದಿಗಳು ಕಂದಾಯ ಪಾವತಿ ರಶೀದಿ, ಗಣಕೀಕೃತ ಪಹಣಿ ಮತ್ತು ಅಸಲು ದಾವಾ ಸಂ.82/2022 ರ ವಾದ ಪತ್ರವನ್ನು ಹಾಜರುಪಡಿಸಿರುತ್ತಾರೆ.

12. ಈ ಹಂತದಲ್ಲಿ ದಾವೆಯ ಗುಣಾವಗುಣಗಳ ಬಗ್ಗೆ ಚರ್ಚಿಸಲು ಸಾಧ್ಯವಿರುವುದಿಲ್ಲ. ಆದರೆ ದಾವೆಯು ಮೇಲ್ನೋಟಕ್ಕೆ ವಾದಿಗಳ ಪರವಾಗಿದೆಯೇ ಎಂಬುದನ್ನು ನೋಡಬೇಕಾಗಿರುತ್ತದೆ. ಈ ದಾವೆಯಲ್ಲಿ ಪರಿಶೀಲಿಸಲಾಗಿ, ವಾದಿಗಳು ತಮ್ಮ ವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿ ಇರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ದಾವಾ ಸ್ವತ್ತಿನ ಖಾತೆಯು ಮರಿಶೆಟ್ಟಿ ಎಂಬುವವರ ಹೆಸರಿನಲ್ಲಿ ಖಾತೆ ಇರುತ್ತದೆ. ಸದರಿ ಮರಿಶೆಟ್ಟಿ ಎಂದರೆ

ಪ್ರತಿವಾದಿಗಳ ಪ್ರಕಾರ ಶೆಟ್ಟರ ಬಸಪ್ಪನ 2 ನೇ ಮಗನು ಅಗಿರುತ್ತಾನರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗದ ದಾವೆ ಚಾಲ್ತಿಯಲ್ಲಿರುತ್ತದೆ. ಮುಖ್ಯವಾಗಿ ದಾವಾ ಸ್ವತ್ತಿನಲ್ಲಿ ತಾವು ಸ್ವಾಧೀನಾನುಭವದಲ್ಲಿ ಇಲ್ಲದೇ ಇರುವ ಬಗ್ಗೆ ವಾದಿಗಳು ಒಪ್ಪಿಕೊಂಡಿರುತ್ತಾರೆ. ಪ್ರಸ್ತುತ ದಾವೆಯು ಶಾಶ್ವತ ನಿರ್ಭಂಧಕಾಜ್ಞೆಯ ಪರಿಹಾರದ ದಾವೆಯಾಗಿದ್ದು, ಈ ದಾವೆಯಲ್ಲಿ ವಾದಿಗಳು ಸ್ವಾಧೀನಾನುಭವದಲ್ಲಿ ಇರುವುದಾಗಿ ರುಜುವಾತು ಪಡಿಸಬೇಕಾಗಿರುತ್ತದೆ. ಆದರೆ ವಾದಿಗಳೇ ಒಪ್ಪಿಕೊಂಡಂತೆ ಅವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇಲ್ಲದೇ ಇರುವುದು ತಿಳಿದು ಬರುತ್ತದೆ. ಆದ್ದರಿಂದ ಪ್ರತಿವಾದಿಗಳು ದಾವಾ ಸ್ವತ್ತಿಗೆ ಪ್ರವೇಶ ಮಾಡದಂತೆ ನಿರ್ಬಂಧಿಸುವ ಆದೇಶ ನೀಡುವ ಪ್ರಮೆಯ ಉದ್ಬವವಾಗುವುದಿಲ್ಲ. ವಾದಿಗಳು ಮೇಲ್ನೋಟಕ್ಕೆ ದಾವೆಯನ್ನು ತಮ್ಮ ಪರವಾಗಿ ಹೊಂದಿರದೇ ಇರುವುದು ಮತ್ತು ಅನುಕೂಲತೆಯ ಒಲವು ವಾದಿಗಳ ಪರವಾಗಿ ಇಲ್ಲದೇ ಇರುವುದು ಕಂಡುಬರುತ್ತದೆ. ಒಂದು ವೇಳೆ ಈ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗಳಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಈ ಎಲ್ಲಾ ಕಾರಣಗಳಿಂದ ಮಧ್ಯಂತರ ಅರ್ಜಿ ಸಂಖ್ಯೆಃ2 ಪುರಸ್ಕಾರಗೊಳ್ಳಲು ಯೋಗ್ಯವಾಗಿರುವುದಿಲ್ಲವೆಂದು **ಈ ನ್ಯಾಯಾಲಯವು ಅಭಿಪ್ರಾಯಪಟ್ಟು ಅಂಶ ಸಂಖ್ಯೆಃ1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಿದೆ.**

13. **ಅಂಶ ಸಂಖ್ಯೆಃ4ಃ-** ಈ ಮೇಲ್ಕಂಡ 1 ರಿಂದ 3 ನೇ ಅಂಶಗಳಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

**ವಾದಿಗಳು ಸಲ್ಲಿಸಿರುವ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಂತೆ ಮಧ್ಯಂತರ ಅರ್ಜಿ ಸಂಖ್ಯೆಃII ನ್ನು ವಜಾಗೊಳಿಸಲಾಗಿದೆ.**

**ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.**

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2022** ನೇ ಇಸವಿ ಜುಲೈ **1** ನೇ ದಿನಾಂಕದಂದು ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

sd/-

**(ಮಹೇಂದ್ರ ಎಂ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್? ಸಿ., ಚನ್ನಪಟ್ಟಣ.**

**ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ**
**(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)**

**ಆದೇಶ**

**ವಾದಿಗಳು ಸಲ್ಲಿಸಿರುವ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಂತೆ ಮಧ್ಯಂತರ ಅರ್ಜಿ ಸಂಖ್ಯೆ:II ನ್ನು ವಜಾಗೊಳಿಸಲಾಗಿದೆ.**

**ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.**

sd/-
**(ಮಹೇಂದ್ರ ಎಂ.)**
**ಪ್ರಧಾನ ಸಿವಿಲ್?ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್?ಸಿ, ಚನ್ನಪಟ್ಟಣ.**